**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**
**LAC.No. 176/2018**

**ಪಿ.ಡಬ್ಲ್ಯೂ. 1**

ದಿನಾಂಕಃ **07.12.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ. ಸಿ.ಜಿ.ಎಲ್. ವಕೀಲರಿಂದ

ನಾನು ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿದ್ದು ನಿಶಾನೆಗಳಾಗಿ ಗುರುತಿಸಲಾಯಿತು.

| | |
|---|---|
| ನಿ.ಪಿ.7 | ದಿ.17.02.2012 ರ ಕರಯಿಪತ್ರದ ದೃಢೀಕೃತ ನಕಲು |
| ನಿ.ಪಿ.8 | ಎಲ್ .ಎ.ಸಿ.187/2018 ರ ಆದೇಶದ ದೃಢೀಕೃತ ನಕಲು |
| ನಿ.ಪಿ.9 | ದಿನಾಂಕ ನಮೂದಿಲ್ಲದ ಕಲಂ.64 ಕಾಯ್ದೆ 2013 ರ ಅಡಿ ವಿಶೇಷ ಭೂಸ್ವಾಧೀನಾಧಿಕಾರಿಗಳ ಮುಂದೆ ಅರ್ಜಿದಾರರುಗಳು ಸಲ್ಲಿಸಿದ ಅರ್ಜಿ |
| ನಿ.ಪಿ.10 | ವಿಶೇಷ ಭೂ ಸ್ವಾಧೀನಾಧಿಕಾರಿಗಳು ಅರ್ಜಿ ಸ್ವೀಕರಿಸಿದ ದಿನಾಂಕ 07.06.2018 ರ ಮೊಹರು ಇರುವ ಇಂಡೆಕ್ಸ್ ಫಾರಂ. |

ಪಾಟೀ ಸವಾಲು ಃ **2** ನೇ ಎದುರುದಾರರ ಪರವಾಗಿ ಶ್ರೀಮತಿ ಎ.ಎಸ್.. ವಕೀಲರಿಂದ

ಸರ್ವೆ ನಂಬರ್ 3/1 ರಲ್ಲಿ ಒಟ್ಟು 7-1/2 ಗುಂಟೆ ಜಮೀನು ಭೂಸ್ವಾಧೀನವಾಗಿರುತ್ತದೆ. ಪರಿಹಾರದ ಹಣ 3,27,000/-ರೂಗಳನ್ನು ಕೊಟ್ಟಿದ್ದಾರೆ. ನಾನು ಹಾಜರು ಮಾಡಿರುವ ನಿಪಿ.2 ರಲ್ಲಿ ಮರಗಳು ಇರುವುದಿಲ್ಲ ಎಂದರೆ ಸರಿಯಲ್ಲ. ಮುಂದುವರಿದು ಕಾಡು ಮರಗಳು ಇದ್ದವು ಎಂದು ಹೇಳುತ್ತಾರೆ. ಬೊಮ್ಮನಹಳ್ಳಿ ಗ್ರಾಮ ತುಮಕೂರಿನಿಂದ 8 ಮೈಲಿಗಳು ದೂರವಿದ್ದು ಬೆಳ್ಳಾವಿ ಹೋಬಳಿಗೆ ಬರುತ್ತದೆ. ಬೊಮ್ಮನಹಳ್ಳಿಯಿಂದ ವಸಂತ ನರಸಾಪುರಕ್ಕೆ 10 ಕಿಲೋ ಮೀಟರ್ ದೂರವಾಗುತ್ತದೆ. ರಾಷ್ಟ್ರೀಯ ಹೆದ್ದಾರಿಗೆ ನಮ್ಮ ಜಮೀನು

ಹೊಂದಿಕೊಂಡಿದೆ. ರೈಲ್ವೆಯವರು ಮಾರುಕಟ್ಟೆಗೆ ಅನುಗುಣವಾಗಿ ಯೋಗ್ಯ ಪರಿಹಾರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಪ್ರಮಾಣ ಪತ್ರ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ವಾದೀನವಾದ ಜಮೀನು ತರೀ ಜಮೀನು.

2. ನಿ.ಪಿ.9 ನ್ನು ನಾನು 1 ನೇ ಎದುರುದಾರರ ಕಚೇರಿಯಲ್ಲಿ ಕಾಲಮಿತಿಯಲ್ಲಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಕಾಲಮಿತಿಯಲ್ಲಿ ಅರ್ಜಿ ಹಾಜರುಪಡಿಸದೇ ಇದ್ದರೂ ಹಾಜರುಪಡಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

3. ಭೂ ಸ್ವಾಧೀನಾಧಿಕಾರಿಗಳು ನನಗೆ ನೋಟೀಸ್ ಜಾರಿ ಮಾಡಿದ್ದರು. ನಾನು ನೋಟೀಸ್ ಸ್ವೀಕರಿಸಿದ ದಿನಾಂಕ ನೆನಪಿಲ್ಲ. ಎದುರುದಾರರು ಸೂಕ್ತ ಮತ್ತು ವೈಜ್ಞಾನಿಕ ಪರಿಹಾರವನ್ನು ಪಾವತಿಸಿದ್ದರೂ ನಾನು ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಗಧಿತ ಕಾಲಾವಾಧಿಯಲ್ಲಿ ಅರ್ಜಿ ಸಲ್ಲಿಸದೇ ಇರುವುದರಿಂದ ನಾನು ಹೆಚ್ಚಿನ ಪರಿಹಾರ ಪಡೆಯಲು ಅರ್ಹಳಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ನೇ ಎದುರುದಾರರ ಪರ ವಕೀಲರು 2 ನೇ ಎದುರುದಾರರ ಪರ ವಕೀಲರ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಪರಿಗಣಿಸುವಂತೆ ಕೋರಿದ್ದು ಅನುಮತಿಸಲಾಯಿತು

ಮರು ವಿಚಾರಣೆ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು